ವೈಖರಿಯಿಂದಲೇ ಚಿದಾನಂದ ಅವಳು ಹೇಳಿದ್ದನ್ನು ಪರಿಪಾಲಿಸುವಂತಾಗಿದ್ದ. ಒಂದು ಮಾತ್ರೆ ನುಂಗಲು ಅಷ್ಟೆಲ್ಲಾ ಗಲಾಟೆ ಮಾಡುತ್ತಿದ್ದವನು, 'ಕೊಲ್ತೀರಿ ನನ್ನ...' ಎಂದು ಕೂಗಾಡುತ್ತಿದ್ದವನು, ಮಗಳು ಹೇಳಿದಂತೆ ಕೇಳುತ್ತಿದ್ದ. ಭಾಮ ಅವನನ್ನು ಓಲೈಸುತ್ತಿದ್ದ ಪರಿಯೇ ವಿಭಿನ್ನ. ಅಲ್ಲಿ ಅಸಹನೆಯಿರಲಿಲ್ಲ, ಕೋಪದ ಸುಳಿವಿರಲಿಲ್ಲ, ಮತ್ತು ತಿರಸ್ಕಾರವೂ.

'ನನ್ನಪ್ಪ ಜಾಣ ಅಲ್ವಾ? ನಾನು ಹೇಳಿದ್ದನ್ನ ಕೇಳ್ತಾನೆ ಅಲ್ವಾ? ಮಗಳೇ, ಬಾ ಇಲ್ಲಿ. ಅಜ್ಜನ ಬಾಯಿಗೆ ನೀನೇ ಮಾತ್ರೆ ಹಾಕು. ನಾನು ನೀರು ಕೊಡ್ತೀನಿ. ಗುಳುಕ್ ಅಂತ ಹೇಗೆ ನುಂಗ್ತಾನೆ ನೋಡು ಜಾಣಮರಿ...' ಇದು ಮಾತ್ರೆ ನುಂಗುವ ಆಟದಂತೆ ಚಿದಾನಂದನಿಗೆ ಮೋಜೆನಿಸುತ್ತಿತ್ತು ಅನಿಸುತ್ತದೆ. ತಕರಾರಿಲ್ಲದೆ ಅವನು ಮಗಳ ಮಾತನ್ನು ಪರಿಪಾಲಿಸುತ್ತಿದ್ದ. ಉಂಡ ಊಟ ಮರೆತು ಗಲಾಟೆ ಮಾಡುತ್ತಿದ್ದವನು, ಕ್ರಮೇಣ ಉಂಡೆನೋ, ಬಿಟ್ಟೆನೋ ಯಾವುದೂ ಗೊತ್ತಾಗದ ಸ್ಥಿತಿಗೆ ತಲುಪಿದ್ದವನು, ಸ್ನಾನಪಾನಗಳಿಂದ ಹಿಡಿದು ಪ್ರತಿಯೊಂದಕ್ಕೂ ಇನ್ನೊಬ್ಬರ ಮೇಲೆ ಅವಲಂಬನೆ ಬೆಳೆಸಿಕೊಂಡುಬಿಟ್ಟಿದ್ದ. ಭಾಮನ ದಿನದ ಕೆಲಸದ ಜೊತೆ ಹೆಚ್ಚುವರಿಯಾಗಿ ಈ ಕೈಂಕರ್ಯ ಸೇರ್ಪಡೆಯಾಗಿತ್ತು. ಮಗಳು ದೊಡ್ಡೋಳಾದ್ಲು ಅಂತ ಈಗ ಇನ್ನೊಂದು ಮಗೂನ ಮಡಿಲಿಗೆ ಹಾಕಿದಾನೆ ಭಗವಂತ.

'ನಂಗೆ ಈಗ ಇಬ್ರು ಮಕ್ಕಳು ಕಣೋ...' ಗಂಡನ ಜೊತೆ ಹೇಳಿಕೊಳ್ಳುತ್ತಿದ್ದಳು ಭಾಮ, ಕುಶಾಲಿನಿಂದ.

'ನಿನಗೆ ಇಬ್ಬರಾದ್ರೆ ನನಗೂ ಇಬ್ರೇ...' ಎನ್ನುತ್ತಿದ್ದ ವೆಂಕಟೇಶ, ಅವಳಿಗೆ ಕೈ ಬಿಡುವಿಲ್ಲದಿದ್ದರೆ ಅವಳ ಹೊಣೆಗಾರಿಕೆಯನ್ನು ತಾನು ವಹಿಸಿಕೊಳ್ಳುತ್ತಿದ್ದ. ಈ ಮೊದಲು ದೊಡ್ಡ ನೌಕರಿಯಲ್ಲಿದ್ದ ಮಾವನನ್ನ ಕಣ್ಣಾರೆ ಕಂಡವನೇನಲ್ಲ ವೆಂಕಟೇಶ. ಅಸಹಾಯಕ ಮುದುಕನೊಬ್ಬನ ಅವಲಂಬನೆ, ಬುದ್ಧಿ ಬೆಳೆಯದ ಮಗುವಿನಂತಹ ವರ್ತನೆ ಕ್ರಮೇಣ ಅವನಿಗೂ ಅಭ್ಯಾಸವಾಗಿತ್ತು. ಅಲ್ಲದೆ ಗಂಡ ಹೆಂಡಿರಿಬ್ಬರಿಗೂ ಮನೆಯೊಳಗಿನ ನಾಲ್ಕು ಗೋಡೆಗಳ ನಡುವಿನ ಸೀಮಿತ ಪ್ರಪಂಚಕ್ಕಿಂತ ಮನೆಯಾಚೆಯ ವ್ಯವಹಾರಗಳೇ ಜಾಸ್ತಿಯಿದ್ದುವು. ಚಿದಾನಂದನ ಮಾತು, ಕೃತಿ, ವರ್ತನೆಗಳ ಕುರಿತು ತಲೆಕೆಡಿಸಿಕೊಳ್ಳುತ್ತಾ ಕೂರಲು ಅವರಿಗೆ ಪುರುಸೊತ್ತಿರಲಿಲ್ಲ. ಅವನನ್ನು ಅವನಿದ್ದ ಹಾಗೆ ಇಬ್ಬರೂ ಸ್ವೀಕರಿಸಿಬಿಟ್ಟಿದ್ದರು. ಚಿದಾನಂದನಿಗೂ ಮನೆಯಾಚೆಯ ಶುದ್ಧ ಗಾಳಿಯಲ್ಲಿ ಉಸಿರಾಡುವ ಅವಕಾಶ ಲಭಿಸಿತ್ತು. ಮೂರು ಹೊತ್ತೂ ಅವನು ಮಲಗಲು ಬಿಡದಂತೆ ಜಾನುವಾರುಗಳ ಮೇಲ್ವಿಚಾರಣೆ ಮಾಡುವಾಗ, ಹಾಲು ಕರೆಸುವಾಗ, ಹೊಲಕ್ಕೆ ಹೋಗುವಾಗ ಜೊತೆಗೆ ಕರೆದುಕೊಂಡು ಹೋಗುತ್ತಿದ್ದಳು ಭಾಮ.

ಅಲ್ಲಿ ಅವಳೊಬ್ಬಳೇ ಅಪ್ಪನ ಮೇಲೆ ಕಣ್ಣಿಟ್ಟಿರಬೇಕಾದ ಅವಶ್ಯಕತೆಯಿರಲಿಲ್ಲ. ಕೆಲಸದಾಳುಗಳು ಇದ್ದೇ ಇರುತ್ತಿದ್ದರು. ಎಲ್ಲರ ಕಣ್ಣು ತಪ್ಪಿಸಿ ಚಿದಾನಂದ ಹೋಗುವುದಾದರೂ ಎಲ್ಲಿಗೆ? ಆಗಿನ್ನೂ ಪ್ರಪಂಚಕ್ಕೆ ಕಾಲಿಟ್ಟ ಮಗು ಕಣ್ಣು ಪಿಳಿಪಿಳಿಸುತ್ತಾ ಹೊಸ ಜಗತ್ತನ್ನು ನೋಡುವಂತೆ ಹಳ್ಳಿಯ ಈ ಬದುಕು ಚಿದಾನಂದನಿಗೆ ವಿಚಿತ್ರದ್ದೋ, ವಿಶೇಷದ್ದೋ ಆಗಿ ಕಾಣಿಸುತ್ತಿರಬಹುದು ಅಥವಾ ಬರಿಯ ದೃಶ್ಯ ಮಾತ್ರವಾಗಿ ಗೋಚರಿಸುತ್ತಿರಬಹುದು. ಅಥವಾ ಬಹಳ ಹಿಂದಿನ ಅವನ ಬಾಲ್ಯಾವಸ್ಥೆಯ ಅಸ್ಪಷ್ಟ ಸ್ಮರಣೆಯನ್ನು ಅವನಲ್ಲಿ ಉದ್ದೀಪಿಸುತ್ತಿರಬಹುದೇ? ಗೊತ್ತಿಲ್ಲ ಭಾಮನಿಗೆ. ಯಾರನ್ನೇ ಆಗಲಿ, ಬುದ್ಧಿ ಸ್ವಸ್ಥವಾಗಿರುವಾಗ ಅವರನ್ನು ನೋಡಿದವರು, ಸ್ವಾಧೀನ ಕಳೆದುಕೊಂಡಾಗ ನೋಡಿದರೆ ಹಿಂದಿನ ವ್ಯಕ್ತಿತ್ವದ ತುಲನೆ ಮಾಡುವ ಸಂಭವ ಇದ್ದೇ ಇರುತ್ತದೆ. ಆದರೆ ಮೊದಲು ನೋಡಿದವರಿಗೆ ಈ ಮನುಷ್ಯ ಇರುವುದೇ ಹೀಗೆ ಎನ್ನು ಒಪ್ಪಿತಭಾವ ಬಂದುಬಿಡುತ್ತದೆ. ಹಿಂದೊಮ್ಮೆ ಅವರು ಹೀಗಿದ್ದರು, ದೊಡ್ಡ ಅಧಿಕಾರಿ ಆಗಿದ್ದರು, ನಡುವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡರೂ ಧೃತಿಗೆಡದೆ ಒಬ್ಬಂಟಿಯಾಗಿ ತಮ್ಮಿಬ್ಬರು ಮಕ್ಕಳನ್ನು ಸಾಕಿ ಸಲಹಿದರು ಎಂದೆಲ್ಲಾ ಹೇಳಿದರೆ ಹೊಸಬರಿಗೆ ಕಟ್ಟುಕತೆಯಂತೆ ಕಾಣಿಸಿಬಿಡುತ್ತದೆ. ವೆಂಕಟೇಶ ಕೂಡ ಮಾವನ ಆ ವ್ಯಕ್ತಿತ್ವವನ್ನು ಊಹೆ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ.

'ನಿಂಗೇನಾದ್ರೂ ಬೇಜಾರಾಗುತ್ತಾ? ಬೇಡದ ತಾಪತ್ರಯಾನ ಮೈಮೇಲೆ ಎಳ್ಕೊಂಡೆ ಅನ್ನಿಸುತ್ತಾ? ಹಾಗೆನ್ನಿಸಿದ್ರೆ ಹೇಳ್ಬಿಡು. ಒಂದಷ್ಟು ದಿನ ಇಟ್ಕೊಂಡು ಕಳಿಸಿ ಬಿಡೋಣ' ಅಪ್ಪನನ್ನು ಕರೆದುಕೊಂಡು ಬಂದ ಹೊಸದರಲ್ಲಿ ಕೇಳಿದ್ದಳು ಭಾಮ, ಗಂಡನನ್ನು.

'ಇಷ್ಟು ಜನಕ್ಕೆ ಅನ್ನ ಹಾಕೋರಿಗೆ ಇನ್ನೊಂದು ಬಾಯಿ ಹೆಚ್ಚಾಗುತ್ತಾ?'

'ಇದು ಬರೀ ಅನ್ನದ ಪ್ರಶ್ನೆ ಅಲ್ಲ ಕಣೋ. ಒಬ್ಬ ಅಸ್ವಾಭಾವಿಕ ಮನುಷ್ಯನನ್ನು ಸಹಿಸಿಕೊಳ್ಳೋ ಪ್ರಶ್ನೆ...'

ಆಗ ವೆಂಕಟೇಶ ಮುತ್ತಿನಂತಹ ಒಂದು ಮಾತಾಡಿದ್ದ,

'ನಾಳೆ ನಮಗೂ ಹೀಗಾಗ್ಬಾರ್ದು ಅಂತ ಇದೆಯಾ ಭಾಮ? ಯಾರ ಭವಿಷ್ಯ ಯಾರಿಗೆ ಗೊತ್ತಿರುತ್ತೆ? ಆಗ ನಮ್ಮ ಮಗಳು ನಮ್ಮನ್ನ ನೋಡ್ಕೋಬೇಕೋ, ಬೇಡ್ವೋ?'

'ಅಲ್ಲಿ ಮಗನೂ ಇದಾನಲ್ಲ...'

'ಮಗಳಿಗೆ ಅಪ್ಪ ಬೇಕು ಅನಿಸಿದ್ರೆ ಮಗಳ ಹತ್ರಾನೇ ಇರಲಿ. ಹೆಣ್ಣುಮಕ್ಕಳು ಮಕ್ಕಳಲ್ಲವಾ? ಅವರ ಮನೇಲಿ ಅಪ್ಪ, ಅಮ್ಮ ಇರಬಾರ್ದಾ?'

'ದೊಡ್ಡ ಮಾತಾಡ್ತಿದ್ದಿ...' ಹೃದಯ ತುಂಬಿ ಹೇಳಿದ್ದಳು ಭಾಮ.

'ನಮ್ಮ ಮಕ್ಕಳು ನಮ್ಮನ್ನ ನೋಡಿ ಕಲಿಯೋ ಹಾಗಿರ್ಬೇಕು ಕಣೇ. ನಾವು ಅವರಿಗೆ ಮೇಲ್ಪಂಕ್ತಿ ಆಗ್ಬೇಕೇ ವಿನಾ ತಪ್ಪು ಮಾದರಿ ಆಗಬಾರ್ದು...'

ಭಾಮ ವೆಂಕಟೇಶನನ್ನು ತಬ್ಬಿಕೊಂಡು ಗಳಗಳನೆ ಅತ್ತಿದ್ದಳು.

'ಏ ಹುಚ್ಚಿ, ಏನಾಯ್ತೇ?' ವೆಂಕಟೇಶ ಅವಳ ತಲೆ ನೇವರಿಸಿದ್ದ. ಉತ್ತರಿಸಲು ಸೂಕ್ತ ಪದಗಳಿರಲಿಲ್ಲ ಭಾಮನ ಬಳಿ. ಅವತ್ತು ಮತ್ತೂ ಒಂದು ಮಾತು ಹೇಳಿದ್ದ ವೆಂಕಟೇಶ,

'ನಮ್ಮಪ್ಪನ್ನ ನೋಡಿ ಯಾರು ಏನಂದ್ಕೋತಾರೋ ಅನ್ನೋ ಹಿಂಜರಿಕೆ ಬೇಡ ನಿಂಗೆ. ಯಾರಾದ್ರೂ ಏನಾದ್ರೂ ಅಂದ್ಕೊಂಡ್ರೆ ಅದು ಅವರ ವ್ಯಕ್ತಿತ್ವದ ಸಮಸ್ಯೆ. ನಮ್ಮದಲ್ಲ...'

ಹೌದಲ್ಲವಾ? ಅಪ್ಪ ಇರುವುದೇ ಹೀಗೆ. ಅವರನ್ನು ಎಲ್ಲರೂ ಸ್ವೀಕರಿಸಬೇಕು, ಆದರಿಸಬೇಕು, ಗೌರವಿಸಬೇಕು ಅನ್ನುವ ಅಪೇಕ್ಷೆ ಯಾಕೆ? ಅವರವರ ವ್ಯಕ್ತಿತ್ವಕ್ಕೆ ತಕ್ಕಂತೆ ಅವರವರ ದೃಷ್ಟಿ. ವೆಂಕಟೇಶ ಇಷ್ಟು ಉದಾರ ಹೃದಯಿ ಎಂದು ಗೊತ್ತಿರಲಿಲ್ಲ ಭಾಮನಿಗೆ. ಗೊತ್ತು ಮಾಡಿಕೊಳ್ಳುವಂತಹ ಪ್ರಸಂಗ ಬಂದಿರಲಿಲ್ಲ. ಒಳ್ಳೆಯವನು ಅವನು. ವೆಂಕಟೇಶ ಅಲ್ಲದೆ ಮತ್ಯಾರಾದರೂ ಆಗಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೋ ಗೊತ್ತಿಲ್ಲ. ತನ್ನ ಭಾವನೆಯನ್ನು ಅವನು ಗೌರವಿಸುತ್ತಾನೆ. ಬೆಲೆ ಕೊಡುತ್ತಾನೆ. ಅಷ್ಟು ಸಾಕು.

ಅವತ್ತು ವೆಂಕಟೇಶ ಮತ್ತೊಂದು ಪ್ರಶ್ನೆ ಕೇಳಿದ್ದ, 'ನಂಗೆ ಒಂದು ವಿಷಯ ಆಶ್ಚರ್ಯ ಅನ್ನಿಸುತ್ತೆ. ಕೇಳ್ಲಾ?'

'ಅದಕ್ಕೇನು ಮುಹೂರ್ತ ನೋಡ್ಬೇಕಾ?'

'ಒಂದು ಸಲ ಅಪ್ಪಂಗೆ ಏಕವಚನ, ಮತ್ತೊಂದು ಸಲ ಬಹುವಚನ. ಯಾವಾಗ ಯಾವುದನ್ನ ಉಪಯೋಗಿಸ್ತಿ ಅಂತ ಗೊತ್ತೇ ಆಗಲ್ಲ. ಯಾಕೆ ಹೀಗೆ?'

'ಅದು ನಮ್ಮ ಕಡೆ ಅಭ್ಯಾಸ ಕಣೋ. ಅಪ್ಪನ ಹತ್ರ ಮಾತಾಡ್ಬೇಕಾದ್ರೆ ಏಕವಚನದಲ್ಲೇ ಮಾತಾಡ್ತೀವಿ. ಬೇರೆಯವರ ಹತ್ರ ಅಪ್ಪನ ವಿಚಾರ ಮಾತಾಡ್ಬೇಕಾದ್ರೆ ಬಹುವಚನ...'

'ಓ, ತಮಾಷೆ ಅನ್ನಿಸುತ್ತೆ'.

'ನಿನ್ನ ತಲೆ...' ಗಂಭೀರವಾದ ಮಾತುಕತೆ ಹಗುರವಾಗಿ ಮುಕ್ತಾಯ ಕಂಡಿತ್ತು.

ಕರೆದ ನೊರೆ ಹಾಲನ್ನು ಕರೆದ ಜಾಗದಲ್ಲೇ ಅಪ್ಪನಿಗೆ ಲೋಟಕ್ಕೆ ಬಗ್ಗಿಸಿ ಕೊಡುತ್ತಿದ್ದಳು ಭಾಮ. ತಾವೇ ಬೆಳೆಯುವ ಭತ್ತದ ಅಕ್ಕಿಯ ಅನ್ನ, ತಾಜಾ ತರಕಾರಿಯ ಪೌಷ್ಟಿಕ ಊಟ, ಹಣ್ಣುಹಂಪಲುಗಳ ಆರೈಕೆ. ಅಪ್ಪನ ಆರೋಗ್ಯ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅವನನ್ನು ಶ್ರದ್ಧೆಯಿಂದ ನೋಡಿಕೊಳ್ಳುತ್ತಿದ್ದಳು ಭಾಮ. ಮಗಳ ಮನೆಗೆ ಬಂದು ಆರು ತಿಂಗಳು ಕಳೆಯುವಷ್ಟರಲ್ಲಿ ಚಿದಾನಂದನ ಮುಖದಲ್ಲಿ ಹೊಸ ಕಳೆ. ಭಾಮ ತನ್ನ ಹೊಸ ಮಗುವನ್ನು ಹೃದಯಕ್ಕೆ ಹಚ್ಚಿಕೊಂಡಿದ್ದಳು ಮತ್ತು ಹೊಸ ಮಗು ಅಮ್ಮನನ್ನು.

* * *

ಎಲ್ಲೋ ಒಂದು ಅರಕೆ ಇತ್ತು. ಭಾಮನ ಎದೆಗೂಡಿನೊಳಗೊಂದು ನೋವಿನ ಮಿಡಿತ ಇತ್ತು. ಅಪ್ಪನನ್ನು ಧಿಕ್ಕರಿಸಿ ಓಡಿ ಬಂದವಳು ತಾನು. ಅಂಥದ್ದೊಂದು ನಿರ್ಧಾರ ಕೈಗೊಳ್ಳುವಲ್ಲಿ ಪ್ರೀತಿಯ ಸೆಳೆತ ಎಷ್ಟು? ಅಪ್ಪನನ್ನು ವಿರೋಧಿಸಬೇಕೆಂಬ ಹಟ ಎಷ್ಟು? ಎರಡೂ ಸಮಸಮವಾಗಿದ್ದುವೇ? ಅಪ್ಪನ ಅಕ್ರಮ ಸಂಬಂಧ ತನ್ನಲ್ಲಿ ಹುಟ್ಟಿಸಿದ್ದ ಹೇಯಭಾವನೆಯ ಪ್ರತೀಕಾರವೇ ತನ್ನ ನಿರ್ಧಾರಕ್ಕೆ ಕಾರಣವೇ? ಪ್ರೀತಿ ಅಂದರೆ ಅದರೊಡನೆ ಶುದ್ಧ ಪ್ರೀತಿ ಮಾತ್ರ ಇರುತ್ತದೆಯಾ ಅಥವಾ ಅರಿವಿಗೆ ದಕ್ಕದ ಕೌಟುಂಬಿಕ, ಭಾವನಾತ್ಮಕ ಕಾರಣಗಳು ಬೆರೆತುಕೊಂಡಿರುತ್ತವೆಯೇ? ಅಪ್ಪನನ್ನು